## ದಿನಾಂಕ: 03.04.2025ರಂದು ನಡೆದ ಪ್ರಶಾಸನ ಸಮಿತಿಯ 75ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿಯ 75ನೆಯ ಸಭೆಯನ್ನು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 03-04-2025 ಗುರುವಾರ ಬೆಳಿಗ್ಗೆ 11.30 ಗಂಟೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಕರೆಯಲಾಗಿತ್ತು.

**ಸಭೆಯಲ್ಲಿ ಹಾಜರಿದ್ದವರು:**

1. ಡಾ. ಅಹಲ್ಯಾ ಎಸ್., ಕುಲಪತಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ – ಅಧ್ಯಕ್ಷರು
2. ಡಾ. ಆರ್. ಶ್ರೀಧರ ಶಾಸ್ತ್ರಿ ಸೂರಿ, ಪ್ರಾಧ್ಯಾಪಕರು(ನಿ), ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾ ಮಠ, ತುಮಕೂರು – ಸದಸ್ಯರು
3. ಶ್ರೀಮತಿ ಸಮತಾ ಹೊಸಪೇಟೆ, "ಬಾಲಾಜಿ", ಕುವೆಂಪು ನಗರ ಬಸ್ ನಿಲ್ದಾಣದ ಎದುರುಗಡೆ, ಹನುಮಾನ್ ನಗರ, ಬೆಳಗಾವಿ – 19
4. ಡಾ. ಬಂಗಾರಮ್ಮ, ಕೆ. ನಂ–126, ಶಾಂತಿನಗರ, ನಾಗರತ್ನಮ್ಮ ಬಡಾವಣೆ, ಶಿವಮೊಗ್ಗ. 577201. – ಸದಸ್ಯರು
5. ಡಾ. ಶಿವಲಿಂಗಯ್ಯ, 'Shrungara' No. 9– 75/3 (20) Kankanady, 'B' BAJAL Post, Mangalore 575007 – ಸದಸ್ಯರು
6. ಶ್ರೀ ಬಸಪ್ಪ ಡೊಂಕಬಳ್ಳಿ, #302/302 ಶ್ರೀನಿಧಿ ನಿಲಯ, ಬೈರಪ್ಪ ಬಿಲ್ಡಿಂಗ್, 4ನೇ ಅಡ್ಡರಸ್ತೆ, ರಾಮಮಂದಿರ ರಸ್ತೆ, ಕೊಡಿಗೆಹಳ್ಳಿ, ಬೆಂಗಳೂರು– 560092 – ಸದಸ್ಯರು
7. ಶ್ರೀ ಹನುಮಂತನಾಥ ಸ್ವಾಮೀಜಿ, ಪೀಠಾಧ್ಯಕ್ಷರು, ಕುಂಚಿಟಿಗರ ಮಹಾ ಸಂಸ್ಥಾನ ಮಠ (ರಿ.), ನರಸಿಂಹಗಿರಿ ಕ್ಷೇತ್ರ, ಕೊರಟಗೆರೆ, ತುಮಕೂರು – 572129 – ಸದಸ್ಯರು
8. ಶ್ರೀ ನಾರಾಯಣ ಯಾಜಿ ಬಿನ್ ರಾಮ ಯಾಜಿ, ಕೆ.ಹೆಚ್.ಬಿ ಕಾಲೋನಿ, ಪ್ರಭಾತ ನಗರ, ಹೊನ್ನಾವರ, ಉತ್ತರ ಕನ್ನಡ–581334 – ಸದಸ್ಯರು
9. ಶ್ರೀ ವಿಶ್ವನಾಥ ಪಿ. ಹಿರೇಮಠ, ಕುಲಸಚಿವರು, ಕ.ಆ.ಸೇ., ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ – ಸದಸ್ಯ ಕಾರ್ಯದರ್ಶಿಗಳು

**ಸಭೆಯಲ್ಲಿ ಹಾಜರಿಲ್ಲದವರು:**

1. ಅಪರ ಮುಖ್ಯ ಕಾರ್ಯದರ್ಶಿಗಳು, ಹಣಕಾಸು ಇಲಾಖೆ – ಸದಸ್ಯರು
2. ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ) – ಸದಸ್ಯರು
3. ಪ್ರಧಾನ ಕಾರ್ಯದರ್ಶಿಗಳು, ಉನ್ನತಶಿಕ್ಷಣ ಇಲಾಖೆ – ಸದಸ್ಯರು
4. ಆಯುಕ್ತರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ – ಸದಸ್ಯರು
5. ಪ್ರೊ. ರಜನೀಶ ಕುಮಾರ ಮಿಶ್ರ, ಸಂಸ್ಕೃತ ಮತ್ತು ಇಂಡಿಕ್ ಅಧ್ಯಯನ ವಿಭಾಗ, ಜವಾಹರಲಾಲ ನೆಹರು ವಿಶ್ವವಿದ್ಯಾಲಯ, ನವದೆಹಲಿ – 110067 – ಸದಸ್ಯರು
6. ಡಾ. ಮುನೀರ್ ಅಹಮ್ಮದ್ ನಂ–403, 38ಎ ಕ್ರಾಸ್, 26ನೇ ಮೇನ್, 9ನೇ ಬ್ಲಾಕ್, ಜಯನಗರ, ಬೆಂಗಳೂರು– 560041 – ಸದಸ್ಯ
7. ಶ್ರೀ ಪ್ರದೀಪ್ ಈಶ್ವರ್, ಮಾನ್ಯ ವಿಧಾನಸಭಾ ಸದಸ್ಯರು, ಚಿಕ್ಕಬಳ್ಳಾಪುರ ವಿಧಾನ ಸಭಾ ಕ್ಷೇತ್ರ, ನಂ–516, ಪೆರೇಸಂದ್ರ ಗ್ರಾಮ, ಚಿಕ್ಕಬಳ್ಳಾಪುರ ತಾಲ್ಲೂಕು, ಚಿಕ್ಕಬಳ್ಳಾಪುರ– 562104. – ಸದಸ್ಯರು

ಸಭೆಯ ಆರಂಭದಲ್ಲಿ ಕುಲಸಚಿವರು ಪ್ರಾಸ್ತಾವಿಕವಾಗಿ ಮಾತನಾಡಿ ಎಲ್ಲರನ್ನೂ ಸ್ವಾಗತಿಸಿದರು. ನಂತರ ಕಾರ್ಯಸೂಚಿಯಂತೆ ವಿಷಯವಾರು ಚರ್ಚಿಸಿ ನಿರ್ಣಯ ಕೈಗೊಳ್ಳಲಾಯಿತು.

| ವಿ.ಸಂ. | ವಿಷಯ ಮತ್ತು ಟಿಪ್ಪಣಿ |
|---|---|
| **ವಿಷಯ 01** | **ಪ್ರಶಾಸನ ಸಮಿತಿಯ 73ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗ್ಗೆ.** |
| **ಟಿಪ್ಪಣಿ** | ಪ್ರಶಾಸನ ಸಮಿತಿ 73ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 09.01.2025ರಂದು ನಡೆಯಿತು. ಸಭೆಯ ನಿರ್ಣಯದ ಅನುಪಾಲನಾ ವರದಿಯನ್ನು ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಪ್ರಶಾಸನ ಸಮಿತಿಯ 73ನೇ ಸಭೆಯ ಅನುಪಾಲನಾ ವರದಿಯನ್ನು ಸಭೆಯು ಅನುಮೋದಿಸಿತು.** |
| **ವಿಷಯ 02** | **ಪ್ರಶಾಸನ ಸಮಿತಿ 74ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗ್ಗೆ.** |
| **ಟಿಪ್ಪಣಿ** | ಪ್ರಶಾಸನ ಸಮಿತಿ 74ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 14.02.2025ರಂದು ನಡೆಯಿತು. ಸಭೆಯ ನಿರ್ಣಯದ ಅನುಪಾಲನಾ ವರದಿಯನ್ನು ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಪ್ರಶಾಸನ ಸಮಿತಿಯ 74ನೇ ಸಭೆಯ ಅನುಪಾಲನಾ ವರದಿಯನ್ನು ಸಭೆಯು ಅನುಮೋದಿಸಿತು.** |
| **ವಿಷಯ 03** | **ಹಣಕಾಸು ಸಮಿತಿ 49ನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗ್ಗೆ.** |
| **ಟಿಪ್ಪಣಿ** | ದಿನಾಂಕ: 01.04.2025ರಂದು ನಡೆದ ಹಣಕಾಸು ಸಮಿತಿ 49ನೇ ಸಭೆಯ ನಡಾವಳಿಯನ್ನು ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಹಣಕಾಸು ಸಮಿತಿ 49ನೇ ಸಭೆಯ ನಡಾವಳಿಯನ್ನು ಸಭೆಯು ಅನುಮೋದಿಸಿತು.** |
| **ವಿಷಯ 04** | **ಪ್ರಶಿಕ್ಷಣ ಪರಿಷತ್ತಿನ 42ನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗ್ಗೆ.** |
| **ಟಿಪ್ಪಣಿ** | ದಿನಾಂಕ: 01.04.2025ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 42ನೇ ಸಭೆಯ ನಡಾವಳಿಯನ್ನು ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಪ್ರಶಿಕ್ಷಣ ಪರಿಷತ್ತಿನ 42ನೇ ಸಭೆಯ ನಡಾವಳಿಯನ್ನು ಸಭೆಯು ಅನುಮೋದಿಸಿತು.** |
| **ವಿಷಯ 05** | **ಪ್ರಸಾರಾಂಗ 'ಪರಿಶೀಲನಾ ಸಮಿತಿ' ಸಭೆಯ ನಡಾವಳಿಯನ್ನು ಅನುಮೋದಿಸುವ ಬಗ್ಗೆ.** |
| **ಟಿಪ್ಪಣಿ** | ದಿನಾಂಕ: 23.01.2025ರಂದು ನಡೆದ ಪ್ರಸಾರಾಂಗ 'ಪರಿಶೀಲನಾ ಸಮಿತಿ' ಸಭೆಯ ನಡಾವಳಿಯನ್ನು ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಪ್ರಸಾರಾಂಗ 'ಪರಿಶೀಲನಾ ಸಮಿತಿ' ಸಭೆಯ ನಡಾವಳಿಯನ್ನು ಸಭೆಯು ಅನುಮೋದಿಸಿತು.** |
| **ವಿಷಯ 06** | **ಪ್ರೊ. ವೀರನಾರಾಯಣ ಎನ್. ಕೆ. ಪಾಂಡುರಂಗಿ, ಪ್ರಾಧ್ಯಾಪಕರು ಮತ್ತು ಡೀನ್, ವೇದಾಂತ ನಿಕಾಯ, ಕಸಂವಿ ಇವರನ್ನು ಪೂರ್ಣಪ್ರಜ್ಞಾ ಸಂಶೋಧನಾ ಮಂದಿರಂ, ಬೆಂಗಳೂರು ಇದರ ನಿರ್ದೇಶಕರ ಹುದ್ದೆಗೆ ನಿಯೋಜನೆ ಮೇಲೆ ತೆರಳಲು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಹುದ್ದೆಯ ಕರ್ತವ್ಯದಿಂದ ಬಿಡುಗಡೆಗೊಳಿಸಿರುವ ಬಗ್ಗೆ.** |

| | |
|---|---|
| ಟಿಪ್ಪಣಿ | ಪ್ರೊ. ವೀರನಾರಾಯಣ ಎನ್. ಕೆ. ಪಾಂಡುರಂಗಿ, ಪ್ರಾಧ್ಯಾಪಕರು ಮತ್ತು ಡೀನ್, ವೇದಾಂತ ನಿಕಾಯ, ಕಸಂವಿ ಇವರು ಪೂರ್ಣಪ್ರಜ್ಞಾ ಸಂಶೋಧನಾ ಮಂದಿರಂ, ಬೆಂಗಳೂರು ಇದರ ನಿರ್ದೇಶಕರ ಹುದ್ದೆಗೆ ನಿಯೋಜನೆ ಮೇಲೆ ತೆರಳಲು ನಿರಾಕ್ಷೇಪಣಾ ಪತ್ರ ನೀಡಲು ದಿನಾಂಕ: 21.09.2024ರಂದು ನಡೆದ ಪ್ರಶಾಸನ ಸಮಿತಿಯ 72ನೇ ಸಭೆಯಲ್ಲಿ ಬಹುಮತದ ನಿರ್ಣಯ ಕೈಗೊಂಡಿದ್ದು, ಪ್ರಸ್ತುತ ಸದರಿಯವರು ಪೂರ್ಣಪ್ರಜ್ಞಾ ಸಂಶೋಧನಾ ಮಂದಿರದ ನಿರ್ದೇಶಕ ಹುದ್ದೆಗೆ ನಿಯೋಜನೆಯ ಮೇರೆಗೆ ನೇಮಕಾತಿಗೊಂಡಿದ್ದರಿಂದ ಸದರಿಯವರನ್ನು ಪೂರ್ಣಪ್ರಜ್ಞಾ ಸಂಶೋಧನಾ ಮಂದಿರಂ ಇದರ ನಿರ್ದೇಶಕ ಹುದ್ದೆಗೆ ಮೂರು ವರ್ಷಗಳ ಅವಧಿಯ ನಿಯೋಜನೆ ಮೇಲೆ ತೆರಳಲು ವಿಶ್ವವಿದ್ಯಾಲಯದ ಸೇವೆಯಿಂದ ಬಿಡುಗಡೆ ಮಾಡಲು ಬಿಡುಗಡೆ ಆದೇಶ ಪತ್ರ ಸಂಖ್ಯೆ: ಕಸಂವಿ/ಸಿಬ್ಬಂದಿ-ಬೋಧಕ/ಯುಜಿಸಿ-ಸಹ.ಪ್ರಾ/02/2013-14/2025/411, (e-File No:52427) ದಿನಾಂಕ: 03.02.2025ರನ್ವಯ ಬಿಡುಗಡೆ ಮಾಡಿ ಆದೇಶಿಸಿದೆ.<br><br>ಆದರೆ ಹಣಕಾಸು ಅಧಿಕಾರಿಗಳು ಇವರ ಬಿಡುಗಡೆಯ ಬಗ್ಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ನೌಕರರ HRMS ವೇತನದ ಕಡತದಲ್ಲಿ (ಕಡತ ಸಂಖ್ಯೆ: ಕಸಂವಿ/01/HRMS/ವೇ.ಕ/2024-25) ವಿಶ್ವವಿದ್ಯಾಲಯದ ಸರ್ಕಾರಿ ನೌಕರನು ಸರ್ಕಾರದ ಅನುಮೋದನೆ ಪಡೆಯದೆ ಖಾಸಗಿ ಸಂಸ್ಥೆಗೆ ನಿಯೋಜಿಸಲು ಸರ್ಕಾರದ ನಿಯಮಗಳಲ್ಲಿ ಯಾವುದೇ ಅವಕಾಶವಿರುವುದಿಲ್ಲ. ಸರ್ಕಾರಿ ನೌಕರನು ಸರ್ಕಾರದ ಅನುಮೋದನೆ ಪಡೆಯದೆ ಖಾಸಗಿ ಸಂಸ್ಥೆಯಲ್ಲಿ ನಿಯೋಜನೆಯ ಮೇರೆಗೆ ಕಾರ್ಯ ನಿರ್ವಹಿಸುತ್ತಿರುವ ಅವಧಿಯನ್ನು ಸರ್ಕಾರದ ಸೇವಾ ಅವಧಿಯೆಂದು ಪರಿಗಣಿಸಲು ಸಾಧ್ಯವಿಲ್ಲ. ಖಾಸಗಿ ಸಂಸ್ಥೆಯ ಸೇವಾ ಅವಧಿಯಲ್ಲಿನ ವಾರ್ಷಿಕ ವೇತನ ಬಡ್ತಿಗೆ ಪರಿಗಣಿಸಲು ಸಾಧ್ಯವಿಲ್ಲ. ಸೇವಾ ಹಿರಿತನ ಮತ್ತು ಜೇಷ್ಠತೆಗೆ ಸರ್ಕಾರಿ ನಿಯಮಾನುಸಾರ ಅರ್ಹರಿರುವುದಿಲ್ಲ. ವೇತನ, ರಜೆ ಇತರೆ ಯಾವುದೇ ಸರ್ಕಾರಿ ಆರ್ಥಿಕ ಸವಲತ್ತುಗಳನ್ನು ಸರ್ಕಾರಿ ನಿಯಮಗಳಂತೆ ಪರಿಗಣಿಸಲು ಅರ್ಹರಿರುವುದಿಲ್ಲ. ಸದರಿ ಸರ್ಕಾರಿ ನೌಕರರನ್ನು ವಿಶ್ವವಿದ್ಯಾಲಯವು ಸರ್ಕಾರದ ಅನುಮೋದನೆ ಇಲ್ಲದೆ ನಿಯೋಜನೆ ಮಾಡಿರುವ ಬಗ್ಗೆ ಮಹಾಲೇಖಪಾಲರ ತೀವ್ರ ಆಕ್ಷೇಪಣೆಗೆ ಗುರಿಯಾಗುವುದರಿಂದ ಸದರಿಯವರ ನಿಯಮ ಬಾಹಿರ ನಿಯೋಜನೆಯನ್ನು ಕೂಡಲೇ ರದ್ದುಪಡಿಸಿ ವಿಶ್ವವಿದ್ಯಾಲಯದ ಮೂಲ ಕರ್ತವ್ಯಕ್ಕೆ ತಕ್ಷಣವೇ ವರದಿ ಮಾಡಿಸಿಕೊಳ್ಳಬೇಕಿರುತ್ತದೆ ಎಂದು ಕಂಡಿಕೆ ಸಂಖ್ಯೆ: 103 ಮತ್ತು 105ರಲ್ಲಿ ಅಭಿಪ್ರಾಯಿಸಿರುತ್ತಾರೆ.<br>ಆದ್ದರಿಂದ ಈ ವಿಷಯಕ್ಕೆ ಸಂಬಂಧಿಸಿದಂತೆ ಸಭೆಯ ಸೂಕ್ತ ತೀರ್ಮಾನಕ್ಕೆ ಮಂಡಿಸಿದೆ. |
| ನಿರ್ಣಯ | ಸದರಿ ವಿಷಯದ ಕುರಿತಂತೆ ಸಭೆಯು ಕೂಲಂಕುಶವಾಗಿ ಚರ್ಚಿಸಿತು.<br><br>ಹಣಕಾಸು ಅಧಿಕಾರಿಯವರು ಪ್ರೊ. ವೀರನಾರಾಯಣ ಎನ್. ಕೆ. ಪಾಂಡುರಂಗಿ ಇವರ ನಿಯೋಜನೆಯ ಕುರಿತಂತೆ ಕಡತದಲ್ಲಿ ಪ್ರಸ್ತಾಪಿಸಿರುವ ಆಕ್ಷೇಪಣೆಗಳ ಕುರಿತಂತೆ, ಈ ಹಿಂದೆ ಸದರಿಯವರಿಗೆ NOC ನೀಡುವ ಸಂದರ್ಭದಲ್ಲಿ ಹಾಗೂ ವಿಶ್ವವಿದ್ಯಾಲಯದಿಂದ ಪೂರ್ಣಪ್ರಜ್ಞಾ ಸಂಶೋಧನಾ ಮಂದಿರಂ ನಿಯೋಜನೆ ಮೇಲೆ ಬಿಡುಗಡೆಗೊಳಿಸುವ ಸಂದರ್ಭದಲ್ಲಿಯೂ ಸಹ ಸದರಿಯವರ ನಿಯೋಜನೆಗೆ ನಿಯಮಗಳಲ್ಲಿ ಅವಕಾಶವಿರುವುದಿಲ್ಲ ಎಂದು ಅಭಿಪ್ರಾಯಿಸಿದಾಗ್ಯೂ ಸಹ ಬಹುಮತದ ನಿರ್ಣಯದ ಹಿನ್ನೆಲೆಯಲ್ಲಿ ಸದರಿಯವರನ್ನು ವಿಶ್ವವಿದ್ಯಾಲಯದ ಉಪಕುಲಸಚಿವರ ಸಹಿಯೊಂದಿಗೆ ಬಿಡುಗಡೆ ಆದೇಶ ಹೊರಡಿಸಲಾಗಿದ್ದು, ಸದರಿ ಬಿಡುಗಡೆ ಆದೇಶದ ಪ್ರತಿಯನ್ನು ಸರ್ಕಾರಕ್ಕೆ ಕಳುಹಿಸದೇ ಇರುವ ಅಂಶವನ್ನು ಸದಸ್ಯ ಕಾರ್ಯದರ್ಶಿಗಳು ಪ್ರಶಾಸನ ಸಮಿತಿ ಸಭೆಯ ಗಮನಕ್ಕೆ ತಂದರು ಹಾಗೂ ಸದರಿಯವರ ನಿಯೋಜನೆಯನ್ನು ತಕ್ಷಣವೇ ಹಿಂಪಡೆಯುವುದು ಸೂಕ್ತ ಎಂಬುದಾಗಿ ತಮ್ಮ ಅಭಿಪ್ರಾಯ ಮತ್ತೊಮ್ಮೆ ವ್ಯಕ್ತಪಡಿಸಿದರು.<br><br>ಪ್ರೊ. ವೀರನಾರಾಯಣ ಎನ್. ಕೆ. ಪಾಂಡುರಂಗಿ, ಪ್ರಾಧ್ಯಾಪಕರು ಮತ್ತು ಡೀನ್, ವೇದಾಂತ ನಿಕಾಯ, ಕಸಂವಿ ಇವರನ್ನು ಪೂರ್ಣಪ್ರಜ್ಞಾ ಸಂಶೋಧನಾ ಮಂದಿರಂ, ಬೆಂಗಳೂರು ಇದರ ನಿರ್ದೇಶಕರ ಹುದ್ದೆಗೆ ನಿಯೋಜನೆ ಮೇಲೆ ತೆರಳಿರುವ ಅಂಶದ ಬಗ್ಗೆ ಸರ್ಕಾರಕ್ಕೆ ಪತ್ರ ಬರೆಯಲು ಸಭೆಯು ತೀರ್ಮಾನಿಸಿತು. ಮುಂದುವರೆದು ಇವರನ್ನು ಬಿಡುಗಡೆಗೊಳಿಸುವಾಗ ವಿಧಿಸಿದ್ದ ಷರತ್ತುಗಳಂತೆ ಸದರಿಯವರ ಸಂಶೋಧನಾ ಪ್ರಕಟಣೆ, ಕಾರ್ಯಾಗಾರ, ವಿಚಾರ ಸಂಕಿರಣ ಮತ್ತು ಇನ್ನಿತರ ಶೈಕ್ಷಣಿಕ ಚಟುವಟಿಕೆಗಳನ್ನು ಕರ್ನಾಟಕ |

ಸಂಸ್ಕೃತ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಕಾರ್ಯಕ್ರಮಗಳನ್ನು ಕೈಗೊಳ್ಳದಿರುವ ಬಗ್ಗೆ ಸ್ಪಷ್ಟೀಕರಣ ಕೇಳಲು ಸಭೆಯು ಬಹುಮತದ ನಿರ್ಣಯ ಕೈಗೊಂಡಿತು.

**ವಿಷಯ 07**

ವಿಶ್ವವಿದ್ಯಾಲಯದ ಪರಿಸರ ಮತ್ತು ಸಂಯೋಜಿತ ಕಾಲೇಜುಗಳಲ್ಲಿನ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಪ್ರವೇಶಾತಿಯ ಗರಿಷ್ಠ ಪ್ರಮಾಣವನ್ನು (Maximum Intake Capacity) ಕಡಿಮೆ ಮಾಡುವ ಬಗ್ಗೆ.

**ಟಿಪ್ಪಣಿ**

ಸ್ನಾತಕ ಪದವಿಗೆ 60 ಸೀಟುಗಳು ಮತ್ತು ಸ್ನಾತಕೋತ್ತರ ಪದವಿಗೆ 40 ಸೀಟುಗಳ ಗರಿಷ್ಠ ಪ್ರಮಾಣವನ್ನು ನಿಗದಿಪಡಿಸಿಕೊಂಡಿದ್ದು, ಆದರೆ ಪ್ರವೇಶಾತಿ ತುಂಬಾ ಕಡಿಮೆ ಇದ್ದು, ನಿಗದಿಪಡಿಸಲಾದ ಗರಿಷ್ಠ ಪ್ರಮಾಣವನ್ನು ಮುಟ್ಟಲು ಸಾಧ್ಯವಾಗುತ್ತಿಲ್ಲ. ಹಿಂದಿನ 3 ವರ್ಷಗಳ ಅಂಕಿ ಅಂಶಗಳ ಪ್ರಕಾರ ಹಲವು ಕಾಲೇಜುಗಳಲ್ಲಿ ಮಂಜೂರಾದ ಸೀಟುಗಳಲ್ಲಿ ಶೇಕಡಾ 15 ರಷ್ಟು ಕೂಡ ಭರ್ತಿಯಾಗಿಲ್ಲ ಎಂಬುದು ಗಮನಕ್ಕೆ ಬಂದಿದೆ.

| ಶೈಕ್ಷಣಿಕ ವರ್ಷ | 2023–24 | 2022–23 | 2021–22 |
|---|---|---|---|
| ಮಂಜೂರಾದ ಸೀಟುಗಳು | 6960 | 6960 | 6970 |
| ಭರ್ತಿಯಾದ ಸೀಟುಗಳು | 875 | 768 | 748 |
| ಒಟ್ಟಾರೆ ದಾಖಲಾತಿಯ ಶೇಕಡಾವಾರು | 12.57% | 11.03% | 10.73% |

ಯಾವುದೇ ಸಂಯೋಜಿತ ಕಾಲೇಜು ಅಥವಾ ವಿಶ್ವವಿದ್ಯಾಲಯದ ಪರಿಸರದ ಕಾಲೇಜು ಸರ್ಕಾರದ/ಯುಜಿಸಿ ನಿಯಮಾವಳಿಗಳನ್ವಯ ಯಾವುದೇ ಶಾಸನಾತ್ಮಕ ಸಂಸ್ಥೆಗಳಲ್ಲಿ ನಿಗದಿಪಡಿಸಲಾಗಿರುವ ಮಾನದಂಡಗಳನ್ವಯ ಮೌಲ್ಯಮಾಪನ ಅಥವಾ ಮಾನ್ಯತೆ ಪಡೆಯಲು ಬಯಸಿದರೆ, ಈ ದಾಖಲಾತಿ ಪ್ರಮಾಣವು ಅತ್ಯಂತ ಕಳಪೆ ಕಾರ್ಯಕ್ಷಮತೆಯನ್ನು ಪ್ರತಿಬಿಂಬಿಸುತ್ತವೆ. ಆದ್ದರಿಂದ, ಸ್ನಾತಕ ಪದವಿಗೆ 20 ಸೀಟುಗಳು ಮತ್ತು ಸ್ನಾತಕೋತ್ತರ ಪದವಿಗೆ 10 ಸೀಟುಗಳಿಗೆ ಇಳಿಸುವುದಕ್ಕೆ ಸಭೆಯ ಅನುಮೋದನೆಗೆ ಮಂಡಿಸಿದೆ.

**ನಿರ್ಣಯ**

ವಿಶ್ವವಿದ್ಯಾಲಯದ ಪರಿಸರ ಮತ್ತು ಸಂಯೋಜಿತ ಕಾಲೇಜುಗಳಲ್ಲಿನ ಸ್ನಾತಕ ಕೋರ್ಸ್‌ಗಳಿಗೆ ಗರಿಷ್ಠ – 20 ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ಗರಿಷ್ಠ – 10 ಪ್ರವೇಶಾತಿಯ ಗರಿಷ್ಠ ಪ್ರಮಾಣವನ್ನು (Maximum Intake Capacity) ಮರುನಿಗದಿಪಡಿಸಿ ಅನುಮೋದಿಸಿತು. ಗರಿಷ್ಠ ಮಿತಿಗಿಂತ ಹೆಚ್ಚಿನ ದಾಖಲಾತಿಯ ಬೇಡಿಕೆ ಬಂದಲ್ಲಿ ಕಾಲೇಜು/ಪರಿಸರದಲ್ಲಿ ವಿದ್ಯಾರ್ಥಿಗಳ ದಾಖಲಾತಿ ಮಾಡಿಕೊಂಡು ಘಟನೋತ್ತರ ಅನುಮೋದನೆ ಪಡೆಯುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು. ಮುಂದುವರೆದು BSc – Yogic Science and Councelling ಮತ್ತು MSc – Yoga Therapy and Councelling ಕೋರ್ಸ್‌ಗಳಿಗೆ ಬೇಡಿಕೆ ಹೆಚ್ಚಿರುವುದನ್ನು ಗಮನಿಸಿ ಈ ಕೋರ್ಸ್ಗಳಿಗೆ ಪ್ರವೇಶಾತಿಯ ಗರಿಷ್ಠ ಪ್ರಮಾಣವನ್ನು (Maximum Intake Capacity) BSc – Yogic Science and Councelling ಕೋರ್ಸಿಗೆ 60 ಮತ್ತು MSc – Yoga Therapy and Councelling ಕೋರ್ಸ್‌ಗೆ 40 ಎಂದು ಮರುನಿಗದಿಪಡಿಸಿ ಅನುಮೋದಿಸಿತು.

**ವಿಷಯ 08**

ಬ್ರಿಡ್ಜ್‌ವಾಟರ್ ಸ್ಟೇಟ್ ವಿಶ್ವವಿದ್ಯಾಲಯದೊಂದಿಗೆ ಸಹಿ ಮಾಡಿದ ಒಪ್ಪಂದಕ್ಕೆ (MOU) ಅನುಮೋದನೆ ಪಡೆಯುವ ಬಗ್ಗೆ.

**ಟಿಪ್ಪಣಿ**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯವು ಬ್ರಿಡ್ಜ್ ವಾಟರ್ ಸ್ಟೇಟ್ ಯೂನಿವರ್ಸಿಟಿ, ಬ್ರಿಡ್ಜ್ ವಾಟರ್, ಮ್ಯಾಸಚೂಸೆಟ್ಸ್, USA ನೊಂದಿಗೆ 2 ವರ್ಷಗಳ ಅವಧಿಗೆ 2025 ಫೆಬ್ರವರಿ 12 ರಂದು ಶೆರಾಟನ್ ಗ್ರಾಂಡ್‌ನಲ್ಲಿ ವಾಸ್ತವ ತೊಡಗಿಸಿಕೊಳ್ಳುವಿಕೆ ಮತ್ತು ಸಹಯೋಗದ ಶೈಕ್ಷಣಿಕ ಕಾರ್ಯಕ್ರಮಗಳು ಅಥವಾ ಹಂಚಿಕೆಯ ಆಸಕ್ತಿಯ ವಿವಿಧ ಶೈಕ್ಷಣಿಕ ಕ್ಷೇತ್ರಗಳಲ್ಲಿ ಕಾರ್ಯಾಗಾರಗಳನ್ನು ಕೈಗೊಳ್ಳುವ ಬಗೆಗಿನ ಒಪ್ಪಂದಕ್ಕೆ
ಸಹಿ ಹಾಕಿದೆ.

ಎ. ಜಂಟಿ ಸಂಶೋಧನೆ.

ಬಿ. ಜಂಟಿ ಶೈಕ್ಷಣಿಕ ಕಾರ್ಯಕ್ರಮಗಳು ಮತ್ತು ಯೋಜನೆಗಳು.

| | |
|---|---|
| | ಸಿ. ಅಧ್ಯಾಪಕರ ವಿನಿಮಯ.<br>ಡಿ. ಪದವಿ ಮತ್ತು ಸ್ನಾತಕ ಪದವಿ ವಿದ್ಯಾರ್ಥಿಗಳ ವಿನಿಮಯ.<br>ಇ. ಜಂಟಿ ಸಮ್ಮೇಳನಗಳು ಮತ್ತು ವಿಚಾರ ಸಂಕಿರಣಗಳನ್ನು ಆಯೋಜಿಸುವುದು.<br>ಸದರಿ ವಿಷಯವನ್ನು ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಬ್ರಿಡ್ಜ್‌ವಾಟರ್ ಸ್ಟೇಟ್ ವಿಶ್ವವಿದ್ಯಾಲಯದೊಂದಿಗೆ ಒಡಂಬಡಿಕೆ (MOU) ಮಾಡಿಕೊಂಡಿರುವುದಕ್ಕೆ ಸಭೆಯು ಅನುಮೋದಿಸಿತು.** |
| ವಿಷಯ<br>09 | **ಅಮೇರಿಕಾದ ವೇದಿಕ್ ವೆಲ್ನೆಸ್ ವಿಶ್ವವಿದ್ಯಾಲಯದೊಂದಿಗೆ ಒಪ್ಪಂದಕ್ಕೆ (MOU) ಸಹಿ ಹಾಕಲು ಅನುಮೋದನೆ ಪಡೆಯುವ ಬಗ್ಗೆ.:** |
| ಟಿಪ್ಪಣಿ | ಅಮೇರಿಕಾದ ಫ್ಲೋರಿಡಾದ ವೇದಿಕ್ ವೆಲ್ನೆಸ್ ವಿಶ್ವವಿದ್ಯಾಲಯವು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದೊಂದಿಗೆ ಒಪ್ಪಂದಕ್ಕೆ ಸಹಿ ಹಾಕಲು ವಿನಂತಿಸಿದೆ. ಈ ಒಪ್ಪಂದದಲ್ಲಿನ ಮುಖ್ಯ ಅಂಶಗಳು ಈ ಕೆಳಕಂಡಂತಿವೆ.<br>1. ಜಂಟಿಯಾಗಿ ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ ಕಾರ್ಯಕ್ರಮಗಳನ್ನು ನೀಡುತ್ತದೆ. ಮತ್ತು ಇತರ ಯೋಜನೆಗಳಲ್ಲಿ ಸಹಕರಿಸುತ್ತದೆ<br>2. ಸಹಯೋಗದ ಭಾಗವಾಗಿ KSU ಮತ್ತು ವೇದಿಕ್ ವೆಲ್ನೆಸ್ ವಿಶ್ವವಿದ್ಯಾಲಯವು ಆಯೋಜಿಸುವ ಎಲ್ಲಾ ಕಾರ್ಯಕ್ರಮಗಳು, ಸಮ್ಮೇಳನಗಳು, ವಿಚಾರ ಸಂಕಿರಣಗಳು ಮತ್ತು ಕಾರ್ಯಾಗಾರಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದು.<br>3. ಪರಿಣಾಮಕಾರಿ ಮೌಲ್ಯಮಾಪನಗಳು, ಪ್ರಕರಣ ಅಧ್ಯಯನಗಳು ಇತ್ಯಾದಿಗಳನ್ನು ಒಳಗೊಂಡಂತೆ ಪರಿಕಲ್ಪನಾತ್ಮಕ, ನೀತಿ ಮತ್ತು ಕ್ರಿಯಾ-ಆಧಾರಿತ ಸಂಶೋಧನೆ ನಡೆಸುವುದು.<br>4. ಸಾಹಿತ್ಯವನ್ನು ಪ್ರಕಟಿಸಿ ಮತ್ತು ಮೂಲ ಪಠ್ಯಗಳು, ವ್ಯಾಖ್ಯಾನಗಳು ಮತ್ತು ಅನುವಾದಗಳನ್ನು ಒಳಗೊಂಡಂತೆ ಮುದ್ರಣ ಮತ್ತು ಮುದ್ರಣೇತರ ವಸ್ತುಗಳನ್ನು ಅಭಿವೃದ್ಧಿಪಡಿಸುವುದು.<br>5. ಭಾರತೀಯ ಸಂಸ್ಕೃತಿ ಮತ್ತು ಮೌಲ್ಯಗಳ ಮೇಲೆ ವಿಶೇಷ ಒತ್ತು ನೀಡುವ ವಿವಿಧ ಕೋರ್ಸ್‌ಗಳಿಗೆ ಸಂಪನ್ಮೂಲ ಸಾಮಗ್ರಿಗಳ ತಯಾರಿಕೆ.<br>6. ವಿಚಾರ ಸಂಕಿರಣಗಳು, ಸಮ್ಮೇಳನಗಳು ಮತ್ತು ಕಾರ್ಯಾಗಾರಗಳನ್ನು ಆಯೋಜಿಸಿ, ಇತರ ಶಿಕ್ಷಣ ಸಂಸ್ಥೆಗಳು ಮತ್ತು ಸಂಸ್ಥೆಗಳ ಪದವಿಗಳು, ಡಿಪ್ಲೊಮಾಗಳು ಮತ್ತು ಪ್ರಮಾಣಪತ್ರಗಳನ್ನು ಗುರುತಿಸಿ<br>7. ಸಂಸ್ಥೆಗಳಂತೆಯೇ ಸಂಪೂರ್ಣವಾಗಿ ಅಥವಾ ಭಾಗಶಃ ಹೋಲುವ ಉದ್ದೇಶಗಳನ್ನು ಹೊಂದಿರುವ ಯಾವುದೇ ಇತರ ಸಂಘ, ಸಮಾಜ ಅಥವಾ ಸಂಸ್ಥೆಯೊಂದಿಗೆ ಸಹಕರಿಸುವುದು.<br>8. ಎರಡೂ ಸಂಸ್ಥೆಗಳ ಎಲ್ಲಾ ಅಥವಾ ಯಾವುದೇ ಉದ್ದೇಶಗಳನ್ನು ಸಾಧಿಸಲು ಪ್ರಾಸಂಗಿಕ, ಅಗತ್ಯ ಅಥವಾ ಅನುಕೂಲಕರವಾದ ಎಲ್ಲಾ ಚಟುವಟಿಕೆಗಳನ್ನು ಕೈಗೊಳ್ಳುವುದು.<br>9. ವೈಯಕ್ತಿಕ ಮತ್ತು ಸಾಮಾಜಿಕ ಅಭಿವೃದ್ಧಿ ಮತ್ತು ಬದಲಾವಣೆಗೆ ಕಾರಣವಾಗುವ/ಕೊಡುವ ಯಾವುದೇ ಚಟುವಟಿಕೆಯನ್ನು ಕೈಗೊಳ್ಳುವುದು.<br>ಒಪ್ಪಂದದ ಅವಧಿ 2 ವರ್ಷಗಳು, ಹಣಕಾಸಿನ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಎಲ್ಲಾ ವೆಚ್ಚಗಳನ್ನು ಆಯಾ ಸಂಸ್ಥೆಗಳೆ ಭರಿಸುತ್ತಾರೆ ಮತ್ತು ಈ ವೆಚ್ಚಗಳನ್ನು ಪರಸ್ಪರ ಹಂಚಿಕೊಳ್ಳಲಾಗುವುದಿಲ್ಲ. ಪ್ರಸ್ತುತ ಒಪ್ಪಂದದ ಅಡಿಯಲ್ಲಿ ಅಥವಾ ಅದಕ್ಕೆ ಸಂಬಂಧಿಸಿದಂತೆ ಸಂಸ್ಥೆಗಳ ನಡುವೆ ಉದ್ಭವಿಸಬಹುದಾದ ಯಾವುದೇ ವಿವಾದವನ್ನು ಎರಡೂ ಸಂಸ್ಥೆಗಳ ನಡುವೆ ಪರಸ್ಪರ ಇತ್ಯರ್ಥಪಡಿಸಲಾಗುತ್ತದೆ. ಮಧ್ಯಸ್ಥಿಕೆ ವಿಚಾರಣೆಗಳು ಮತ್ತು ಇದರ ಅನುಸಾರವಾಗಿ ನಡೆಯುವ ಎಲ್ಲಾ ಸಭೆಗಳು ಭಾರತ ದೇಶದ, ಕರ್ನಾಟಕ ರಾಜ್ಯದ ಬೆಂಗಳೂರಿನಲ್ಲಿ ನಡೆಯುತ್ತವೆ ಮತ್ತು ಇಂಗ್ಲಿಷ್‌ನಲ್ಲಿ ನಡೆಸಲ್ಪಡುತ್ತವೆ. ಈ ವಿಷಯವನ್ನು ಸಭೆಯ ಅನುಮೋದನೆಗೆ ಮಂಡಿಸಿದೆ. |

| | |
|---|---|
| ನಿರ್ಣಯ | ಅಮೇರಿಕಾದ ವೇದಿಕ್ ವೆಲ್ನೆಸ್ ವಿಶ್ವವಿದ್ಯಾಲಯದೊಂದಿಗೆ ಒಡಂಬಡಿಕೆಗೆ (MOU) ಸಹಿ ಹಾಕಲು ಸಭೆಯು ಅನುಮೋದಿಸಿತು. |
| ವಿಷಯ 10 | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ "STATUTE GOVERNING CONFERMENT OF HONORARY DEGREE OR OTHER ACADEMIC DISTINCTIONS (Honorius Causa)" IN KARNATAKA SAMSKRITA VISHWAVIDYALAYA" ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡುವ ಬಗ್ಗೆ. |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ "STATUTE GOVERNING CONFERMENT OF HONORARY DEGREE OR OTHER ACADEMIC DISTINCTIONS (Honorius Causa)" IN KARNATAKA SAMSKRITA VISHWAVIDYALAYA" ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಪ್ರಶಾಸನ ಸಮಿತಿ ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ "STATUTE GOVERNING CONFERMENT OF HONORARY DEGREE OR OTHER ACADEMIC DISTINCTIONS (Honorius Causa)" IN KARNATAKA SAMSKRITA VISHWAVIDYALAYA" ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯು ಅನುಮೋದಿಸಿತು. |
| ವಿಷಯ 11 | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ "STATUTE GOVERNING CONVOCATION FOR CONFERRING DEGREES" ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡುವ ಬಗ್ಗೆ. |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ "STATUTE GOVERNING CONVOCATION FOR CONFERRING DEGREES" ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಪ್ರಶಾಸನ ಸಮಿತಿ ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ "STATUTE GOVERNING CONVOCATION FOR CONFERRING DEGREES" ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯು ಅನುಮೋದಿಸಿತು. |
| ವಿಷಯ 12 | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ "STATUTE GOVERNING RULES OF BUSINESS OF THE SYNDICATE, THE ACADEMIC COUNCIL, THE FINANCE COMMITTEE AND THE FACULTIES" ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡುವ ಬಗ್ಗೆ. |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ STATUTE GOVERNING RULES OF BUSINESS OF THE SYNDICATE, THE ACADEMIC COUNCIL, THE FINANCE COMMITTEE AND THE FACULTIES ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಪ್ರಶಾಸನ ಸಮಿತಿ ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ "STATUTE GOVERNING RULES OF BUSINESS OF THE SYNDICATE, THE ACADEMIC COUNCIL, THE FINANCE COMMITTEE AND THE FACULTIES" ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯು ಅನುಮೋದಿಸಿತು. |
| ವಿಷಯ 13 | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ "REGULATIONS GOVERNING THE DEGREE OF DOCTOR OF PHILOSOPHY (PH.D) – VIDYAVARIDHI" ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡುವ ಬಗ್ಗೆ. |

| | |
|---|---|
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ "REGULATIONS GOVERNING THE DEGREE OF DOCTOR OF PHILOSOPHY (PH.D) – VIDYAVARIDHI" ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಪ್ರಶಾಸನ ಸಮಿತಿ ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ "REGULATIONS GOVERNING THE DEGREE OF DOCTOR OF PHILOSOPHY (PH.D) – VIDYAVARIDHI" ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯು ಅನುಮೋದಿಸಿತು. |
| ವಿಷಯ 14 | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಬ್ಬಂದಿಗೆ ಅಧಿಕ ಪ್ರಭಾರದಲ್ಲಿರಿಸಿರುವುದಕ್ಕೆ ಪ್ರಶಾಸನ ಸಮಿತಿಯ ಘಟನೋತ್ತರ ಅನುಮೋದನೆಯನ್ನು ನೀಡುವ ಬಗೆಗೆ. |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಹಿರಿಯ ಸಹಾಯಕರ ಹುದ್ದೆಯು ಪದೋನ್ನತಿಯಿಂದ ಪ್ರಸ್ತುತ ಖಾಲಿ ಇದೆ. ವಿಶ್ವವಿದ್ಯಾಲಯದ ಹಣಕಾಸು ವಿಭಾಗದಲ್ಲಿ ಹೆಚ್ಚುವರಿ ಕೆಲಸ ಕಾರ್ಯಗಳ ನಿರ್ವಹಣೆಗೆ ಅನುಕೂಲವಾಗುವಂತೆ ಶ್ರೀ ಗುರುಪ್ರಸಾದ್ ಆರ್., ಸಹಾಯಕರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಹಿರಿಯ ಸಹಾಯಕರ ಹುದ್ದೆಯ ಹೆಚ್ಚುವರಿ ಪ್ರಭಾರದಲ್ಲಿ ಇರಿಸಿ ಆದೇಶಿಸಿದೆ. ಕರ್ನಾಟಕ ನಾಗರಿಕ ಸೇವಾ ನಿಯಮ(68)ರಂತೆ ಅಧಿಕ ಪ್ರಭಾರದಲ್ಲಿರಿಸಿ ಆದೇಶಿಸಲಾಗಿದ್ದು, ಘಟನೋತ್ತರ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. |
| ನಿರ್ಣಯ | ಶ್ರೀ ಗುರುಪ್ರಸಾದ್ ಆರ್., ಸಹಾಯಕರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಇವರನ್ನು ನಾಗರಿಕ ಸೇವಾ ನಿಯಮ(68)ರಂತೆ ಹಿರಿಯ ಸಹಾಯಕರ ಹುದ್ದೆಯ ಹೆಚ್ಚುವರಿ ಪ್ರಭಾರದಲ್ಲಿ ಇರಿಸಿರುವುದನ್ನು ಸಭೆಯು ಅನುಮೋದಿಸಿತು. |
| ವಿಷಯ 15 | ಶ್ರೀ ಮೇಧಾದಕ್ಷಿಣಾಮೂರ್ತಿ ವೇದಭವನ ಸರ್ಕಾರಿ ಸಂಸ್ಕೃತ ಕಾಲೇಜು, ಗೋಕರ್ಣ ಇಲ್ಲಿಗೆ ವಿಶ್ವವಿದ್ಯಾಲಯದ ಸಿಬ್ಬಂದಿಯನ್ನು ನಿಯೋಜಿಸುವ ಬಗ್ಗೆ. |
| ಟಿಪ್ಪಣಿ | ಸರ್ಕಾರಿ ಪತ್ರ ಸಂಖ್ಯೆ: ಇಡಿ 32 ಯುಎನ್‌ಇ 2025, ದಿ: 18.01.2025 ರಲ್ಲಿ ಶ್ರೀ ಮೇಧಾದಕ್ಷಿಣಾಮೂರ್ತಿ ವೇದಭವನ ಸರ್ಕಾರಿ ಸಂಸ್ಕೃತ ಕಾಲೇಜು, ಗೋಕರ್ಣ ಇಲ್ಲಿ ಖಾಲಿ ಇರುವ ನ್ಯಾಯಶಾಸ್ತ್ರ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಡಾ. ರಾಘವ ಕೆ. ಎಲ್., ಯೋಜನಾ ಸಹಾಯಕರು(ಶೈಕ್ಷಣಿಕ), ನ್ಯಾಯ ಮತ್ತು ವೈಶೇಷಿಕ ವಿಭಾಗ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಇವರನ್ನು ನಿಯೋಜಿಸುವ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸುವಂತೆ ಸೂಚಿಸಿದ್ದು, ವಿಶ್ವವಿದ್ಯಾಲಯದಿಂದ ನಿರಾಕ್ಷೇಪಣಾ ಪತ್ರ ಸಲ್ಲಿಸಲಾಗಿದೆ.<br>ಪ್ರಸ್ತುತ, ಶ್ರೀ ಮೇಧಾದಕ್ಷಿಣಾಮೂರ್ತಿ ವೇದಭವನ ಸರ್ಕಾರಿ ಸಂಸ್ಕೃತ ಕಾಲೇಜು, ಗೋಕರ್ಣ ಇಲ್ಲಿನ ಎಲ್ಲಾ ಬೋಧಕ ಸಿಬ್ಬಂದಿಗಳು ನಿವೃತ್ತರಾಗಿರುವುದರಿಂದ ಡಾ. ಮಂಜುನಾಥ ಭಟ್, ಸಹಾಯಕ ಪ್ರಾಧ್ಯಾಪಕರು, ವೇದಾಂತ ವಿಭಾಗ ಇವರನ್ನು ಪ್ರಾಭಾರಿ ಪ್ರಾಚಾರ್ಯರಾಗಿ ವಿಶ್ವವಿದ್ಯಾಲಯದಿಂದ ನಿಯೋಜಿಸಿದ್ದು, ಇವರ ನಿಯೋಜನೆಯನ್ನು ಹಿಂಪಡೆದು ಡಾ. ರಾಘವ ಕೆ. ಎಲ್., ಯೋಜನಾ ಸಹಾಯಕರು(ಶೈಕ್ಷಣಿಕ) ಇವರನ್ನು ನಿಯೋಜಿಸುವ ಬಗ್ಗೆ ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | ಸರ್ಕಾರದ ಪತ್ರ ಸಂಖ್ಯೆ:ಇಡಿ 32 ಯುಎನ್‌ಇ 2025, ದಿ: 18.01.2025 ರಂತೆ ವಿಶ್ವವಿದ್ಯಾಲಯದಿಂದ ನಿರಾಕ್ಷೇಪಣಾ ಪತ್ರ ಸಲ್ಲಿಸಿರುವುದನ್ನು ಸಭೆಯು ಅನುಮೋದಿಸಿತು ಹಾಗೂ ಡಾ. ಮಂಜುನಾಥ ಭಟ್, ಸಹಾಯಕ ಪ್ರಾಧ್ಯಾಪಕರು, ವೇದಾಂತ ವಿಭಾಗ ಇವರ ನಿಯೋಜನೆಯನ್ನು ಹಿಂಪಡೆದು, ಡಾ. ರಾಘವ ಕೆ. ಎಲ್., ಯೋಜನಾ ಸಹಾಯಕರು(ಶೈಕ್ಷಣಿಕ) ಇವರನ್ನು ನಿಯೋಜಿಸಲು ಸಭೆಯು ಅನುಮೋದಿಸಿತು<br>ಇನ್ನು ಮುಂದೆ 02 ವರ್ಷಗಳ ಕಾಲ ವಿಶ್ವವಿದ್ಯಾಲಯದ ಯಾವುದೇ ಬೋಧಕ/ಬೋಧಕೇತರ ಸಿಬ್ಬಂದಿಗಳ ಯಾವುದೇ ರೀತಿಯ ನಿಯೋಜನೆಗಳನ್ನು ನಿರ್ಬಂಧಿಸಲು ಸಭೆಯು ನಿರ್ಣಯಿಸಿತು. |
| ವಿಷಯ 16 | 'Diploma Course in Dr. B.R. Ambedkar Studies' ಕೋರ್ಸ್ ಪ್ರವೇಶ ಶುಲ್ಕದ ಬಗೆಗೆ |

| | |
|---|---|
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನ ಕೇಂದ್ರವು 'Diploma Course in Dr. B.R. Ambedkar Studies' ಕೋರ್ಸ್ ನಡೆಸುತ್ತಿರುವುದು ಸರಿಯಷ್ಟೆ. ವಿಶ್ವವಿದ್ಯಾಲಯದ ಆದೇಶ ಸಂಖ್ಯೆ: ಕಸಂವಿ/01/ಅಧ್ಯಯನಾಂಗ/ಸ.ಡಿ.ಪಿ.ಜಿ/2023-24; ದಿನಾಂಕ: 21.10.2023ರಲ್ಲಿ ಈ ಕೋರ್ಸ್‌ನ ಅಧ್ಯಯನಕ್ಕೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕವನ್ನು ರೂ. 2500/-ಗಳಿಗೆ ನಿಗದಿಪಡಿಸಿ ಆದೇಶಿಸಲಾಗಿತ್ತು. ಮುಂದುವರೆದು, ಪ್ರವೇಶಾತಿ ಅಧಿಸೂಚನೆ ಸಂಖ್ಯೆ: ಕಸಂವಿ/ಸಡಿಪಿಜಿಡಿ/01/ಆಡಳಿತ-2024-25; ದಿನಾಂಕ: 27.11.2024ರಲ್ಲಿ ಈ ಕೋರ್ಸ್‌ನ ಪ್ರವೇಶಶುಲ್ಕವನ್ನು ರೂ. 3500/-ಗಳಿಗೆ ನಿಗದಿಪಡಿಸಲಾಗಿದೆ. ಪ್ರವೇಶಶುಲ್ಕವನ್ನು ಹೆಚ್ಚಿಸಿರುವುದರಿಂದ ಅಂಬೇಡ್ಕರ್ ಸ್ಟಡೀಸ್ ಕೋರ್ಸ್ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆಯು ತುಂಬಾ ಕಡಿಮೆಯಾಗಿದೆ. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಕೇವಲ 03 ಮಾತ್ರ ಆಗಿದೆ. ಈ ಕೋರ್ಸ್ ಸೇರಬಯಸುವ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳು ಆರ್ಥಿಕವಾಗಿ ಬಹಳಷ್ಟು ಹಿಂದುಳಿದವರಾಗಿರುತ್ತಾರೆ. ಈ ಕೋರ್ಸ್ ಜ್ಞಾನಾಧಾರಿತವಾದುದಾಗಿದ್ದು, ಉದ್ಯೋಗಾಧಾರಿತವಾಗಿಲ್ಲದಿರುವುದರಿಂದ, ಸಾಮಾನ್ಯ ವರ್ಗದ ವಿದ್ಯಾರ್ಥಿಗಳೂ ಕೂಡ ರೂ. 3500/-ಗಳನ್ನು ಪಾವತಿಸಿ ಕೋರ್ಸ್ ಗೆ ಪ್ರವೇಶ ಪಡೆಯಲು ಮುಂದಾಗುತ್ತಿಲ್ಲ.<br>ಈ ವಿಷಯವನ್ನು ದಿನಾಂಕ: 01.04.2025ರಂದು ನಡೆದ ಹಣಕಾಸು ಸಮಿತಿ ಸಭೆಯಲ್ಲಿ ಈ ಕೆಳಗಿನಂತೆ ನಿರ್ಣಯಿಸಲಾಗಿದೆ.<br>" 01 ರೂ 3500/- ರಿಂದ ರೂ 2500/-ಕ್ಕೆ ಇಳಿಸಿ ಶುಲ್ಕವನ್ನು ನಿಗಧಿಪಡಿಸಲಾಯಿತು.<br>02. ಎಸ್ ಸಿ/ಎಸ್ ಟಿ ವಿದ್ಯಾರ್ಥಿಗಳು ಶುಲ್ಕ ರಹಿತವಾಗಿ ನೋಂದಣಿಯಾದ ತಕ್ಷಣ ಎಸ್.ಸಿ.ಪಿ/ಟಿ.ಎಸ್.ಪಿ ಕ್ರಿಯಾ ಯೋಜನೆಯಲ್ಲಿ ಒದಗಿಸಿರುವ ಮೊತ್ತದಲ್ಲಿ ಸದರಿ 2500/-ಗಳನ್ನು ಮರು ಹೊಂದಾಣಿಕೆ ಮಾಡುವ ಷರತ್ತಿನೊಂದಿಗೆ ಅನುಮೋದಿಸಿ, ಇದರಿಂದ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಪ್ರೋತ್ಸಾಹ ನೀಡಲು ಸಹಮತಿಸಲಾಯಿತು."<br>ಈ ವಿಷಯವನ್ನು ಪ್ರಶಾಸನ ಸಮಿತಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ದಿನಾಂಕ: 01.04.2025ರಂದು ನಡೆದ ಹಣಕಾಸು ಸಮಿತಿ ಸಭೆಯ ನಿರ್ಣಯದಂತೆ ಕ್ರಮವಹಿಸಲು ಸಭೆಯು ಅನುಮೋದಿಸಿತು. |
| | **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇನ್ನಿತರೆ ವಿಷಯಗಳು** |
| 01. | ಮಾನ್ಯ ಶಾಸಕರು ಮಾಗಡಿ ವಿಧಾನಸಭಾ ಕ್ಷೇತ್ರ, ಇವರು ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ತಿಪ್ಪಸಂದ್ರ ಹೋಬಳಿ, ತಿಪ್ಪಸಂದ್ರ ಗ್ರಾಮದ ವಿಶ್ವವಿದ್ಯಾಲಯಕ್ಕೆ ಸೇರಿದ ಸರ್ವೆ ನಂ.40 ರಲ್ಲಿ 12 ಎಕರೆ ಜಮೀನನ್ನು 'ತಾರಾಲಯ' ನಿರ್ಮಿಸಲು ಬಿಟ್ಟುಕೊಡಲು ವಿಶ್ವವಿದ್ಯಾಲಯದಿಂದ NOC ನೀಡುವಂತೆ ಕೋರಿರುವ ಬಗ್ಗೆ. |
| ಟಿಪ್ಪಣಿ | ವಿಶ್ವವಿದ್ಯಾಲಯಕ್ಕೆ ಸೇರಿದ ಸರ್ವೆ ನಂ.40 ರಲ್ಲಿ 12 ಎಕರೆ ಜಮೀನನ್ನು 'ತಾರಾಲಯ' ನಿರ್ಮಿಸಲು ಬಿಟ್ಟುಕೊಡಲು ವಿಶ್ವವಿದ್ಯಾಲಯದಿಂದ NOC ನೀಡುವುದಕ್ಕೆ ಸಂಬಂಧಿಸಿದಂತೆ ದಿನಾಂಕ: 14.02.2025ರಂದು ನಡೆದ 74ನೇ ಪ್ರಶಾಸನ ಸಭೆಯಲ್ಲಿ ಮಂಡಿಸಲಾಗಿ, ಈ ಕೆಳಕಂಡಂತೆ ನಿರ್ಣಯಿಸಲಾಯಿತು.<br>ಮಾನ್ಯ ಶಾಸಕರು ಕೋರಿರುವಂತೆ ವಿಶ್ವವಿದ್ಯಾಲಯಕ್ಕೆ ಸೇರಿದ 100 ಎಕರೆ ಜಾಗದಲ್ಲಿ 12 ಎಕರೆ ಜಾಗವನ್ನು ಬಿಟ್ಟುಕೊಡುವ ಸಂಬಂಧ ಪ್ರಶಾಸನ ಸಮಿತಿ ಸಭೆಯಲ್ಲಿ ವಿವರವಾಗಿ ಚರ್ಚಿಸಲಾಗಿ, ಸರ್ಕಾರದ ಆದೇಶ ಸಂಖ್ಯೆ: ಆರ್.ಡಿ. 112 ಎಲ್.ಜಿ.ಬಿ 2012, ದಿನಾಂಕ: 30.03.2013 ರಲ್ಲಿ ಗುತ್ತಿಗೆ /ಉಪಗುತ್ತಿಗೆಗೆ ನೀಡುವುದಾಗಲೀ, ಅಡಮಾನ, ವರ್ಗಾವಣೆ, ದಾನ, ಇತರೆ ಯಾವುದೇ ರೀತಿಯ ಪರಭಾರೆಯನ್ನು ಮಾಡುವ ಕುರಿತಂತೆ ಈ ಕೆಳಕಂಡಂತೆ ಷರತ್ತನ್ನು ವಿಧಿಸಲಾಗಿದೆ.<br>"ಮಂಜೂರಾದ ಜಮೀನನ್ನು ಕಂದಾಯ ಇಲಾಖೆಯ ಅನುಮತಿ ಇಲ್ಲದೆ ಮಾರಾಟ ಮಾಡುವುದಾಗಲೀ, ಗುತ್ತಿಗೆ /ಉಪಗುತ್ತಿಗೆಗೆ ನೀಡುವುದಾಗಲೀ, ಅಡಮಾನ, ವರ್ಗಾವಣೆ, ದಾನ, ಇತರೆ ಯಾವುದೇ ರೀತಿಯ ಪರಭಾರೆಯನ್ನು ಮಾಡಬಾರದು." |

| | |
|---|---|
| | ಮೇಲ್ಕಂಡಂತೆ ಸದರಿ 100 ಎಕರೆ ಜಾಗದಲ್ಲಿ ವಿಶ್ವವಿದ್ಯಾಲಯದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಉದ್ದೇಶಕ್ಕಾಗಿ ಮಾತ್ರ ಬಳಸಬಹುದಾಗಿದ್ದು, ವಿಶ್ವವಿದ್ಯಾಲಯದ ಜಾಗವನ್ನು ಬೇರೆಯ ಉದ್ದೇಶಕ್ಕೆ ಬಳಸಲು ನಿರಾಪೇಕ್ಷಣೆ ಪತ್ರವನ್ನು (NOC) ಕೊಡುವ ಅಧಿಕಾರವು ವಿಶ್ವವಿದ್ಯಾಲಯಕ್ಕೆ ಆಗಲಿ ಪ್ರಶಾಸನ ಸಮಿತಿಗಾಗಲಿ ಇರುವುದಿಲ್ಲ. ಆದ್ದರಿಂದ ಈ ವಿಷಯದ ಬಗ್ಗೆ ಸರ್ಕಾರದ ಮಾರ್ಗದರ್ಶನ ಕೋರಿ ಪತ್ರ ಬರೆಯಲು ನಿರ್ಣಯಿಸಿ, ಅದರಂತೆ ಕ್ರಮವಹಿಸಲು ಮಾನ್ಯ ಕುಲಪತಿಗಳು ಮತ್ತು ಕುಲಸಚಿವರಿಗೆ ಅಧಿಕಾರ ನೀಡಿ ಸಭೆಯು ತೀರ್ಮಾನಿಸಿತು. ಇದರನ್ವಯ ನಮ್ಮ ಕಛೇರಿ ಪತ್ರ ಸಂಖ್ಯೆ: ಕಸಂವಿ/ಕು.ಸ.ಆ/2024-25/114, ದಿನಾಂಕ: 15.02.2024 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ. ಇವರಿಗೆ ಪತ್ರ ಬರೆಯಲಾಗಿತ್ತು.<br>ಸರ್ಕಾರವು ಪತ್ರ ಸಂಖ್ಯೆ: ಇಡಿ 78 ಯುಎನ್ಇ 2025, ದಿನಾಂಕ: 07.03.2025 ರ ಪತ್ರದಲ್ಲಿ ತಾರಾಲಯ ಹಾಗೂ ವಿಜ್ಞಾನ ಕೇಂದ್ರವನ್ನು ನಿರ್ಮಿಸಲು 12 ಎಕರೆ ಜಾಗವನ್ನು ನೀಡಲು ಇರುವ ಸಾಧಕ ಭಾದಕಗಳ ಕುರಿತು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ, 2009 ರ ಪ್ರಕರಣ 3ರನ್ವಯ ನಿಯಮಾನುಸಾರ ಪರಿಶೀಲಿಸಿ ವಿಶ್ವವಿದ್ಯಾಲಯದ ಸಕ್ಷಮ ಪ್ರಾಧಿಕಾರಗಳ ನಿರ್ಣಯ ಹಾಗೂ ಸಂಪೂರ್ಣ ವರದಿಯೊಂದಿಗೆ ಪರಿಷ್ಕೃತ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಿರುತ್ತದೆ. ಆದ್ದರಿಂದ ಸದರಿ ವಿಷಯವನ್ನು ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | "ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ, 2009 ರ ಪ್ರಕರಣ 3 (5) ಮತ್ತು (6)ನೇ ಪರಂತುಕಗಳಲ್ಲಿ ಅವಕಾಶವಿರುವಂತೆ ಅನುಮೋದಿಸಿ ಸರ್ಕಾರಕ್ಕೆ ಪೂರ್ವಾನುಮೋದನೆಗಾಗಿ ಮಂಡಿಸುವುದು ಹಾಗೂ ಇನ್ನು ಮುಂದೆ ವಿಶ್ವವಿದ್ಯಾಲಯದ ಜಮೀನನ್ನು ಯಾವುದೇ ಪ್ರಾಧಿಕಾರಕ್ಕಾಗಲೀ ಅಥವಾ ಸಂಸ್ಥೆಗಾಗಲೀ ಯಾವುದೇ ಉದ್ದೇಶಗಳಿಗಾಗಲೀ ನೀಡತಕ್ಕದ್ದಲ್ಲ" ಎಂದು ನಿರ್ಣಯಿಸಲಾಗಿದ್ದು, ಈ ಬಾರಿ ಮಾತ್ರ ತಾರಾಲಯ ಹಾಗೂ ವಿಜ್ಞಾನ ಕೇಂದ್ರವನ್ನು ನಿರ್ಮಿಸಲು 12 ಎಕರೆ ಜಮೀನನ್ನು ಬಿಟ್ಟುಕೊಡಲು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಹಮತಿ ಇದ್ದು ಸರ್ಕಾರದ ಪೂರ್ವಾನುಮೋದನೆ ಪಡೆದು ಕ್ರಮವಹಿಸಲು ಸಭೆಯ ಅನುಮೋದಿಸಿತು. |

ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಶ್ರೀ ವಿಶ್ವನಾಥ ಪಿ. ಹಿರೇಮಠ, ಕ.ಆ.ಸೇ.
ಕುಲಸಚಿವರು
ಸದಸ್ಯ ಕಾರ್ಯದರ್ಶಿಗಳು

ಡಾ. ಅಹಲ್ಯಾ ಎಸ್.
ಕುಲಪತಿಗಳು
ಅಧ್ಯಕ್ಷರು